# ಪ್ರಥಮ ಪಿಯುಸಿ ಮಧ್ಯವಾರ್ಷಿಕ ಪರೀಕ್ಷೆ, ಸೆಪ್ಟೆಂಬರ್/ಅಕ್ಟೋಬರ್ 2026

## ವಿಷಯ : ಕನ್ನಡ (01)

**ಸಮಯ : 3 ಗಂಟೆಗಳು** | **ಅಂಕಗಳು : 80**

**ಸೂಚನೆ :**

**'ಅ'–ವಿಭಾಗದಲ್ಲಿನ ಪ್ರಶ್ನೆಗಳಿಗೆ ಪ್ರಥಮವಾಗಿ ಬರೆದ ಉತ್ತರಗಳನ್ನು ಮಾತ್ರವೇ ಮೌಲ್ಯಮಾಪನದಲ್ಲಿ ಪರಿಗಣಿಸಲಾಗುವುದು.**

**'ಅ' – ವಿಭಾಗ**

**I ಅ) ಈ ಕೆಳಗಿನ ಪ್ರಶ್ನೆಗಳಿಗೆ ನೀಡಿರುವ ಉತ್ತರಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ. 10x1=10**

1. 'ಲೇಸ ಮರೆತು ಕಷ್ಟಕ್ಕೆ ಕಡಿದಾಡುವ' ಎಂಬ ಮಾತಿನರ್ಥ
   ಅ) ಕೆಡುಕು ಮರೆತು ಒಳಿತು ಬಯಸುವ  ಆ) ಒಳಿತು ಮರೆತು ಕೆಡಕನ್ನೇ ಬಯಸುವ
   ಇ) ಒಳಿತು ಕೆಡುಕು ಎರಡನ್ನೂ ಬಯಸುವ  ಈ) ಒಳಿತು ಕೆಡುಕುಗಳ ವ್ಯತ್ಯಾಸವನ್ನೇ ಅರಿಯದ
2. ಸತ್ಯವ ನುಡಿವುದು ಯಾವುದಕ್ಕೆ ಶೃಂಗಾರ?
   ಅ) ಕರಕ್ಕೆ  ಆ) ಕರಣಕ್ಕೆ  ಇ) ವದನಕ್ಕೆ  ಈ) ವಚನಕ್ಕೆ
3. ಕೈಲಾಸದಲ್ಲಿ ಚೆನ್ನಯ್ಯನಿಗೆ ಸಿಕ್ಕ ಪದವಿ
   ಅ) ದೇವ ಪದವಿ  ಆ) ಗಣ ಪದವಿ  ಇ) ಗಂಧರ್ವ ಪದವಿ  ಈ) ಇಂದ್ರ ಪದವಿ
4. ಕಾಡಿನಲ್ಲಿ ಸೀತೆಗೆ ಆಶ್ರಯ ಕೊಟ್ಟವರು
   ಅ) ವಸಿಷ್ಠ ಮುನಿಗಳು  ಆ) ವಿಶ್ವಾಮಿತ್ರ ಮುನಿಗಳು  ಇ) ವಾಲ್ಮೀಕಿ ಮುನಿಗಳು  ಈ) ಕೌಶಿಕ ಮುನಿಗಳು
5. ಯಾವ ತೆರದಿ ಸ್ವಾಮಿ ನಮ್ಮನ್ನು ಬಿಡದೆ ರಕ್ಷಿಸುವನು?
   ಅ) ಬಂಧುವಿನ ತೆರದಿ  ಆ) ರಾಜನ ತೆರದಿ  ಇ) ಪಡೆದ ಜನನಿಯ ತೆರದಿ  ಈ) ಸ್ನೇಹಿತನ ತೆರದಿ
6. ನೀರಿಗಾಗಿ ಕರಿಯ ಏನನ್ನು ತರುತ್ತಿದ್ದ?
   ಅ) ಕೊಡಪಾನ  ಆ) ತಾಮ್ರದ ಬಿಂದಿಗೆ  ಇ) ದೊಡ್ಡಬಾನಿ  ಈ) ಕುಡಿಕೆ
7. ಶಾಸ್ತ್ರೀ ಮಾಸ್ತರ ಮತ್ತು ಅಂಬವ್ವರ ಪ್ರೀತಿ ಕಡಲಲ್ಲಿ ಮಿಂದ ನಿರೂಪಕರಲ್ಲಿ ಉಂಟಾದ ಪರಿಣಾಮ
   ಅ) ಅಕ್ಷರ ಮಳೆ ಧಾರಾಕಾರವಾಗಿ ಸುರಿಯಿತು
   ಆ) ಪ್ರೀತಿಯ ಮಳೆ ಧಾರಾಕಾರವಾಗಿ ಸುರಿಯಿತು
   ಇ) ದನಕಾಯುವ ಬಳಗದ ನೆನಪಿನ ಮಳೆ ಧಾರಾಕಾರವಾಗಿ ಸುರಿಯಿತು
   ಈ) ಓದಬೇಕೆಂಬ ಅರಿವಿನ ಮಳೆ ಧಾರಾಕಾರವಾಗಿ ಸುರಿಯಿತು
8. ಯಾರ ಹೆಸರನ್ನು ಕೇಳಿದರೆ ಪಿಶಾಚಿಗಳು ಹೆದರುತ್ತವೆ?
   ಅ) ಸೈತಾನ  ಆ) ಶಿವ  ಇ) ಪಿಶಾಚಿ  ಈ) ಬೋಳೇಶಂಕರ
9. ರಾಜಕುಮಾರಿಗೆ ಬಂದ ರೋಗ,
   ಅ) ಹೊಟ್ಟೆನೋವು  ಆ) ತಲೆನೋವು  ಇ) ಕಣ್ಣುನೋವು  ಈ) ಕಾಲುನೋವು
10. "ಜೊತೆ ಕೂತು ಊಟ ಮಾಡಿ ಎಷ್ಟು ದಿನಗಳಾದವು ಬನ್ನಿ, ಅಣ್ಣ ತಮ್ಮಂದಿರು ಒಟ್ಟಿಗೆ ಕೂತು ಊಟ ಮಾಡೋಣ. ಹೆಣ್ಣಿದ್ದ ಮನೆಯ ಸೌಭಾಗ್ಯವೇ ಬೇರೆ. ಅತ್ತಿಗೆಯವರ ಹಸ್ತಗುಣದಿಂದ ಅಡುಗೆ ಮನೆಯಾಗಲೆ ಪರಿಮಳಭರಿತವಾಗಿದೆ" – ಎಂಬ ಮಾತಿನ ಅನ್ವಯ ಬೋಳೇಶಂಕರನ ದೃಷ್ಟಿಯಲ್ಲಿ ಒಂದು ಒಳ್ಳೆಯ ಮನೆ ಹೇಗಿರಬೇಕು?
    ಅ) ಅಡುಗೆ ಮನೆ ಸುಂದರವಾಗಿರಬೇಕು  ಆ) ಅಣ್ಣ ತಮ್ಮಂದಿರು ಮದುವೆಯಾದ ಮೇಲೂ ಕೂಡಿ ಬಾಳಬೇಕು
    ಇ) ಅಣ್ಣ ತಮ್ಮಂದಿರು ಜಗಳ ಮಾಡಬೇಕು  ಈ) ಅಣ್ಣ ತಮ್ಮಂದಿರು ಮದುವೆಯಾದ ನಂತರ ಬೇರೆಯಾಗಬೇಕು

**ಆ) ಬಿಟ್ಟ ಸ್ಥಳಗಳಿಗೆ ಆವರಣದಲ್ಲಿ ಕೊಟ್ಟಿರುವ ಉತ್ತರಗಳಲ್ಲಿ ಸೂಕ್ತವಾದುದನ್ನು ಆರಿಸಿ ಬರೆಯಿರಿ : 5x1=5**
**(ಹತ್ತು, ಅಕ್ಕಿ, ತಮಾಶೆ, ರಾಗಿ, ಕಾಕತಾಳ, ಇನ್ನೂರೈವತ್ತು)**

11. ವೈದ್ಯಾಧಿಕಾರಿ ಇಲ್ಲಿಯವರೆಗೆ ಈ ರೀತಿಯ ________ ನ್ಯಾಯವನ್ನು ಕಂಡಿರಲಿಲ್ಲ.
12. ಹಲಸಿನ ಮರ ಮಾರಿದ್ದರಿಂದ ಕರಿಸಿದ್ದೇಗೌಡನಿಗೆ ಸಿಕ್ಕ ಹಣ ________
13. ಬಣ್ಣ, ಗಟ್ಟಿತನ, ತಾಳಿಕೆ ಎಲ್ಲದರಲ್ಲೂ ಕನ್ನಡ ಜನಕ್ಕೆ ಹತ್ತಿರವಾಗುವುದು ________
14. ಜ್ಯೋತಿಷಿಗಳ ಭವಿಷ್ಯವಾಣಿ ಓದಲು ________ ಆಗಿರುತ್ತದೆ.
15. ಶಾಸ್ತ್ರಿಮಾಸ್ತರಿಗೆ ________ ವರ್ಷ ಸೇವೆ ಇತ್ತು.

(ಪು.ತಿ.ನೋ)

**ಇ. ಹೊಂದಿಸಿ ಬರೆಯಿರಿ:** **5x1=5**

16.

| 'ಅ' | | 'ಬ' |
|---|---|---|
| ಅ) ದೇವನೊಲಿದನ ಕುಲವೇ ಸತ್ಕುಲಂ | – | 1) ಬಿ.ಸಿ. ರಾಮಚಂದ್ರಶರ್ಮ |
| ಆ) ಸಿಸು ಮಕ್ಕಳಿಗೊಲಿದ ಮಾದೇವ | – | 2) ಕುವೆಂಪು |
| ಇ) ಅಖಂಡ ಕರ್ನಾಟಕ | – | 3) ಡಾ. ಪಿ.ಕೆ. ರಾಜಶೇಖರ |
| ಈ) ಎಂದಿಗೆ | – | 4) ಎಚ್.ಎಸ್. ಶಿವಪ್ರಕಾಶ್ |
| ಉ) ಮಗು ಮತ್ತು ಹಣ್ಣುಗಳು | – | 5) ಹರಿಹರ |
| | | 6) ಗದಾಯುದ್ಧ |

**'ಆ' – ವಿಭಾಗ**

**II ಅ. ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ.** **3x2=6**

17. ಕಾಲು ಮತ್ತು ದೇಹವನ್ನು ಅಲ್ಲಮನು ಯಾವುದಕ್ಕೆ ಹೋಲಿಸಲಾಗಿದೆ ?
18. ಮೂರ್ಛಿತಳಾದ ಸೀತೆಯನ್ನು ಲಕ್ಷ್ಮಣ ಹೇಗೆ ಉಪಚರಿಸಿದನು ?
19. ಮಾದೇವ ತನ್ನ ಶಿಶು ಮಕ್ಕಳಿಗೆ ಏನೇನು ನೀಡಿ ಸಲಹಿದನು ?
20. ಸರಸ್ವತಿಯ ಸಚಿವ ಮಂಡಲದ ಸದಸ್ಯರು ಯಾರು ?

**ಆ. ಯಾವುದಾದರೂ ಎರಡು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ.** **2x2=4**

21. ನಿಂಗಮ್ಮನ ಗಂಡ ಪ್ರಾಣ ಕಳೆದು ಕೊಂಡದ್ದು ಹೇಗೆ?
22. ನಮ್ಮ ಯಾವ ಜಿಲ್ಲೆಗಳು ರಾಗಿಯ ಕಣಜಗಳಾಗಿವೆ?
23. ವಿಜ್ಞಾನದ ಸಿದ್ಧಾಂತಗಳು ಹೇಗೆ ರೂಪುಗೊಳ್ಳುತ್ತವೆ?
24. ಶಾಸ್ತ್ರಿ ಮಾಸ್ತರರ ಮಕ್ಕಳ ಶವಯಾತ್ರೆಗೆ ಜನ ಹೇಗೆ ಬಂದಿತ್ತು?

**ಇ. ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ.** **3x2=6**

25. ಬೆಟ್ಟದ ಮೇಲಿನ ದೇವತೆಯು ಬೋಳೇಶಂಕರನ ಅಣ್ಣ ಅತ್ತಿಗೆಯರಿಗೆ ಹೇಗೆ ಕಾಣಿಸುತ್ತದೆ?
26. ಕೋಡಂಗಿಯು ತಾನು ಬೆಳಿಗ್ಗೆಯಿಂದ ಏನೇನು ಕೆಲಸ ಮಾಡಿದೆನೆಂದು ಹೇಳುತ್ತಾನೆ?
27. ರಾಜಕುಮಾರಿಯ ಹೊಟ್ಟೆನೋವು ವಾಸಿಮಾಡುವವರಿಗೆ ಏನೇನು ಬಹುಮಾನ ಕೊಡುವುದಾಗಿ ಡಂಗುರ ಸಾರಿಸುತ್ತಾರೆ?
28. ಪಿಶಾಚಿಗಳು ಯಾವುದರಿಂದ ನಾಣ್ಯ ಹಾಗೂ ಸಿಪಾಯಿಗಳನ್ನು ಮಾಡಿಕೊಡುತ್ತವೆ?

**'ಇ'–ವಿಭಾಗ**

**III ಅ. ಯಾವುದಾದರೂ ಎರಡು ವಾಕ್ಯಗಳ ಸಂದರ್ಭ ಸೂಚಿಸಿ–ಸ್ವಾರಸ್ಯ ಬರೆಯಿರಿ.** **2x3=6**

29. ನಿನ್ನೊರೆಗೆ ದೊರೆಗೆ ಗಂಡರುಮೊಳರೇ
30. ಭಾಷೆ ಹೀನರ ಕಂಡು ನಾಚಿಕೆಯಾಯಿತ್ತು.
31. ಪವಳದ ಲತೆಗೆ ಕೆಂಪಿಟ್ಟವರು ಯಾರೊ.

**ಆ. ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ–ಸ್ವಾರಸ್ಯ ಬರೆಯಿರಿ.** **1x3=3**

32. ಇಲ್ಲೇ ಒಸಿ ದಿನ ಇಟ್ಕೊಂಡು ಉಳಿಸಿಕೊಡಿ.
33. ಅಡ್ಡಗೋಡೆಯ ಮೇಲೆ ದೀಪವಿಟ್ಟಂತೆ.
34. ಅಲ್ಲಿ ಅಳದವರೆ ಪಾಪಿಗಳಾಗಿದ್ದರು.

**ಇ. ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ–ಸ್ವಾರಸ್ಯ ಬರೆಯಿರಿ.** **1x3=3**

35 ಬ್ಯಾಂಕಿನಲ್ಲಿ ಕೂಡಿಸಿಟ್ಟು ಮದುವೆ ಆದ ಮೇಲೆ ಹೆಂಡತಿಗೆ ಕೊಡ್ತೀನಿ.
36. ರಾಜಕುಮಾರಿಗೆ ಬಂದಿರೊಂದು ರಾಜರೋಗ.

**'ಈ'–ವಿಭಾಗ**

**IV ಅ. ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ.** **2x4=8**

37. ದುರ್ಯೋಧನನು ದುಶ್ಯಾಸನನನ್ನು ಕಂಡು ವ್ಯಕ್ತಪಡಿಸಿದ ಭಾವನೆಗಳಾವುವು?
38. ಸೀತೆ ಕಲ್ಮರಂ ಕರಗುವಂತೆ ದುಃಖಿಸಿದ ಪರಿಯನ್ನು ವಿವರಿಸಿ.
39. ಅಖಂಡ ಕರ್ನಾಟಕವು ಬರೀ ರಾಜಕೀಯ ನಾಟಕವಲ್ಲ, ಏಕೆ ?

(ಪು.ತಿ.ನೋ)

40. ಎನೆ ದೇವದೇವನೊಲಿದನ ಕುಲವೆ ಸತ್ಕುಲಂ
ಘನಮಹಿಮನೊಲಿದ ಜಾತಿಯೆಜಾತಿ ನಿರ್ಮಲಂ
ಸರ್ವನೊಡನುಂಡ ನಿಮ್ಮಯ ಜಾತಿಗಾಂ ಸರಿಯೆ
ಸರ್ವಜ್ಞನಿನ್ನ ಕೆರ್ಪಿಂಗೆನ್ನ ಶಿರಸರಿಯೆ
ಬಿಡೆನಯ್ಯ ನಿಮ್ಮ ಪದಮಂ ಬಿಟ್ಟು ಬಾಳ್ವೆನೇ
ಮೃಡಮೂರ್ತಿಯಂ ಬಿಟ್ಟು ನರಕದೊಳಗಾಳ್ವೇನೇ ...........

**ಕೊಟ್ಟಿರುವ ಪದ್ಯವನ್ನು ಆಧರಿಸಿ ಕೇಳಿರುವ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ :**

ಅ) ಸತ್ಕುಲ ಎಂದರೆ ಯಾವುದು? (1)

ಆ) ಸರ್ವನೊಡನುಂಡವರು ಯಾರು? (1)

ಇ) ಕರಿಕಾಲ ಚೋಳನು ಚೆನ್ನಯ್ಯನ ಬಳಿ ಏನೆಂದು ನಿವೇದಿಸಿ ಕೊಳ್ಳುತ್ತಾನೆ? (2)

**ಆ. ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ** **1x4=4**

41. ಹಳ್ಳಿಯ ಜನ ಕೈಯಲ್ಲೇ ಮುದ್ದೆ ತಿನ್ನುವ ಚಿತ್ರಣವನ್ನು ವಿವರಿಸಿ.

42. ಜ್ಯೋತಿಷ್ಯ ಏಕೆ ವಿಜ್ಞಾನವಾಗಲಾರದು? ವಿವರಿಸಿ.

**ಇ. ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ** **1x4=4**

43. ಬೋಳೇಶಂಕರನ ಅಣ್ಣಂದಿರೇ ವಾಸಿ ಎಂದು ಪಿಶಾಚಿ ಹೇಳಲು ಕಾರಣವೇನು?

44. ಬೋಳೇಶಂಕರನು ನಾಣ್ಯ ಹಾಗೂ ಸೈನಿಕರನ್ನು ಪಡೆದ ಪ್ರಸಂಗವನ್ನು ವಿವರಿಸಿ.

**ಉ–ವಿಭಾಗ (ಭಾಷಾಭ್ಯಾಸ)**

**V ಅ. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕಕ್ಕೆ ಸೂಚನೆಗೆ ಅನುಗುಣವಾಗಿ ಉತ್ತರಿಸಿ.** **4x2=8**

**45. ಕೆಳಗಿನ ಎರಡು ಪದಗಳನ್ನು ಬಿಡಿಸಿ ಬರೆಯಿರಿ.**

* ಅಕ್ಷರಗಳಭ್ಯಾಸ * ಜಲಾಂಜಲಿ * ಅದರಿಚ್ಚೆ

**46. ಕೆಳಗಿನ ಎರಡು ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ.**

* ಉನ್ನತಿ * ಟೊಳ್ಳು * ಮುಳುಗು

**47. ಕೆಳಗಿನ ಎರಡು ಪದಗಳಿಗೆ ನಾನಾರ್ಥಕ ಪದಗಳನ್ನು ಬರೆಯಿರಿ.**

* ಆಳು * ಕರೆ * ಅರಸು

**48. ಕೆಳಗಿನ ಎರಡು ಪದಗಳಿಗೆ ತದ್ಭವ ಬರೆಯಿರಿ.**

* ಅಕ್ಷರ * ಗ್ರಹ * ನಿತ್ಯ

**49. ಕೆಳಗಿನ ಎರಡು ದ್ವಿರುಕ್ತಿಗಳನ್ನು ವಾಕ್ಯದಲ್ಲಿ ಪ್ರಯೋಗಿಸಿ.**

* ನಡುನಡುಗು * ಊರಿಗೆಊರೇ * ಕೋಟಿ ಕೋಟಿ

**50. ಎರಡು 'ಅನುಕರಣವಾಚಿ' ಶಬ್ದಗಳನ್ನು ಬರೆಯಿರಿ.**

**ಆ. ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧವನ್ನು ಬರೆಯಿರಿ.** **1x4=4**

51. ಕನ್ನಡ ನಾಡು–ನುಡಿ

**ಅಥವಾ**

ಪುಸ್ತಕಗಳ ಮಹತ್ವ

**ಇ. ಯಾವುದಾದರೂ ಒಂದು ವಿಷಯವನ್ನು ಕುರಿತು ಪತ್ರ ಬರೆಯಿರಿ.** **1x4=4**

52. ರಾಮು/ರಜನಿ, ಪ್ರಥಮ ಪಿಯುಸಿ, ಕುವೆಂಪು ಪದವಿ ಪೂರ್ವ ಕಾಲೇಜು, ವಿದ್ಯಾನಗರ, ತುಮಕೂರು. ಈ ವಿಳಾಸದಲ್ಲಿರುವವರು ನೀವೆಂದು ತಿಳಿದು, ಸುಮ/ವಿನಯ್, ಪ್ರಥಮ ಪಿಯುಸಿ, ಸರ್ಕಾರಿ ಪದವಿ ಪೂರ್ವ ಕಾಲೇಜು, ಜಯನಗರ, ಬೆಂಗಳೂರು. ಈ ವಿಳಾಸದಲ್ಲಿರುವ ನಿಮ್ಮ ಗೆಳೆಯ/ಗೆಳತಿಗೆ, ಮಧ್ಯವಾರ್ಷಿಕ ಪರೀಕ್ಷೆಗೆ ನೀವು ಮಾಡಿಕೊಂಡಿರುವ ಸಿದ್ಧತೆಯನ್ನು ಕುರಿತು ಪತ್ರ ಬರೆಯಿರಿ.

**ಅಥವಾ**

ಪ್ರಸನ್ನ/ಸುನೀತ, ಪ್ರಥಮ ಪಿಯುಸಿ, ಜೆ.ಎಸ್.ಎಸ್. ಪದವಿ ಪೂರ್ವ ಕಾಲೇಜು, ಮಂಗಳೂರು. ಇದು ನಿಮ್ಮ ವಿಳಾಸ ಎಂದು ತಿಳಿದು, ಮಣಿಪಾಲದಲ್ಲಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಾಖೆಯ ವ್ಯವಸ್ಥಾಪಕರಿಗೆ ನಿಮ್ಮ ಉಳಿತಾಯ ಖಾತೆ ತೆರೆಯುವಂತೆ ಕೋರಿ ಪತ್ರ ಬರೆಯಿರಿ.

*****